ನೀವು ರಾತ್ರಿ ಹೊತ್ತು ಇದರ ಕಣ್ಣು ನೋಡಿದರೇ ಹೆದರಿಹೋಗುತ್ತಿರಿ. ನೋಡಲು ಅಷ್ಟು ಸುಂದರವಲ್ಲದ ಈ ಪಕ್ಷಿ ಅವನತಿಯೇ ಆಯಿತೆಂದು ಪರಿಸರ ತಜ್ಞರು, ಮತ್ತು ವಿಜ್ಞಾನಿಗಳು ನಂಬಿದ್ದರು. ಅದೃಷ್ಟವಶಾತ್ ಈ ನಿಶಾಚರಿ ಈಗ ಉಳಿದಿದೆ. ಶ್ರೀಲಂಕನ್ ಫ್ರಾಗ್ ಮೌತ್ (ಕಪ್ಪೆಯ ಮುಖದ ಹಕ್ಕಿ) ಎನ್ನುವ ಇದು ಸಾವಿನಂಚಿನ ಖಗವಾಗಿ ಕೆಂಪುಪಟ್ಟಿಗೆ ಸೇರಿದೆ. ಜನ ಇದನ್ನು ತಪ್ಪಾಗಿ ಗೂಬೆಯೆಂದು ಭಾವಿಸುತ್ತಾರೆ. ಇದರ ಕಣ್ಣ ನೋಟವೇ ಭಯಂಕರ. ಅದೂ ಕತ್ತಲಲ್ಲಿ ನೋಡುವಾಗ ಒಂದು ಎರಡು ಬಂದರೂ ಅಚ್ಚರಿಯಿಲ್ಲ. ಮೂಲತಃ ಸೌಮ್ಯ ಸ್ವಭಾವದ ಇದು ಆ ದಿನ ನಮಗೆ ಸಿಕ್ಕಿದ್ದೇ ಒಂದು ಪುಣ್ಯ.

ಮರದ ಕೊಂಬೆ ಮೇಲೆ ಕೂತ ಇದರ ಫೋಟೊ ತೆಗೆಯಲು ನಾವೊಂದು ಅಂಚಿನಲ್ಲಿ ನಿಲ್ಲಬೇಕಿತ್ತು. ಪಕ್ಕದಲ್ಲಿ ದೊಡ್ಡ ಕಂದಕವೊಂದು ಇದ್ದು ಹೆಚ್ಚು ಕಡಿಮೆಯಾದರೆ ಉರುಳಿ ಬೀಳುವ ಅಪಾಯವಿತ್ತು. ತೀರಾ ಇಕ್ಕಟ್ಟಾದ ಜಾಗದಲ್ಲಿ ಟ್ರೈ ಪ್ಯಾಡ್ ಹಾಕಿಕೊಂಡು ನಿಂತೆವು. ಸರದಿಯ ಪ್ರಕಾರ ಒಬ್ಬರು ಚಿತ್ರ ತೆಗೆದು ಮತ್ತೊಬ್ಬರಿಗೆ ಅವಕಾಶ ಕೊಡಬೇಕಿತ್ತು. ಅದರ ಮುಖಕ್ಕೆ ವಿನಯ ಟಾರ್ಚಿನ ಬೆಳಕು ಹಿಡಿಯುತ್ತಿದ್ದ. ನಮ್ಮ ಟೀಮಿನಲ್ಲಿ ಹೇಮರಾಜು ಮೊದಲಿಗೆ ಚಿತ್ರ ಸೆಳೆಯಲು ಹೋದರೆ ಬೇರೆ ಯಾರಿಗೂ ಛಾನ್ಸೇ ಸಿಗುವುದಿಲ್ಲ. ಯಾಕೆಂದರೆ ಅವರು ತಮಗೆ ಸರಿಯಾದ ಚಿತ್ರ ಸಿಗುವವರೆಗೂ ಜಾಗ ಬಿಟ್ಟು ಕೊಡುವುದಿಲ್ಲ. 'ಇರಿ ಸರ್... ಒಂದೈದು ನಿಮಿಷ' ಎಂದು ಬುಸುಗುಡುತ್ತಲೇ ಹಕ್ಕಿ ಹಾರಿ ಹೋಗುವತನಕ ಆಕ್ರಮಣ ಮಾಡಿ ಬಿಡುತ್ತಾರೆ. ಹೀಗಾಗಿ ಅವರಿಗೆ ನಾವೆಲ್ಲಾ ಮಿ. ಪರ್ಫೆಕ್ಟ್ ಎಂದು ನಾಮಕರಣ ಮಾಡಿದ್ದೇವೆ.

ಆ ದಿನ ನನ್ನ ಪುಣ್ಯಕ್ಕೆ ನಾನೇ ಸರತಿ ಸಾಲಲ್ಲಿ ಮೊದಲಿಗನಾಗಿದ್ದೆ. ಕ್ಯಾಮೆರಾ ಸೆಟ್ಟಿಂಗ್ ನೋಡಿಕೊಂಡು ಚಿತ್ರ ತೆಗೆದರೂ ಪಕ್ಷಿ ಮುಸುಕಾಗಿ ಬರುತ್ತಿತ್ತು. ಬೆಳಕು ಬಿಡುವ ವಿನಯನ ತಾಳಕ್ಕೆ ತಕ್ಕಂತೆ ಲೆನ್ಸ್ ಫೋಕಸ್ ಮಾಡುವುದು ಸಮಸ್ಯೆಯಾಗುತ್ತಿತ್ತು. ಕಣ್ಣಿಗೆ ಗುರಿ ಇಡಿ. ಬೆಳಕು ಅದರ ಮುಖದ ಮೇಲೆ ಬಂದ ತಕ್ಷಣ ಚಿತ್ರ ತೆಗೆಯಿರಿ ಎಂದು ವಿನಯ ಪಿಸುಗುಟ್ಟಿದ. ಬೆಳಕು ಹೊಯ್ದಾಡುತ್ತಿತ್ತು. ಹೀಗಾಗಿ ಚಿತ್ರ ಕಚ್ಚಿಕೊಳ್ಳುವುದು ಕಷ್ಟವಾಗುತ್ತಿತ್ತು. ರಾತ್ರಿ ಹೊತ್ತು



ಪಟ ತೆಗೆಯುವ ತೊಂದರೆ ಎಷ್ಟೆಂದು ಗೊತ್ತಾಗಿದ್ದು ಅವತ್ತೇನೆ. ಒಂದೆರೆಡು ಚಿತ್ರ ಸಿಕ್ಕ ಬಳಿಕ ನಾನು ಜಾಗ ಬಿಟ್ಟು ಕೊಟ್ಟೆ. ನನ್ನ ಹಿಂದೆ ನಿಂತಿದ್ದ ಎಲ್ಲರೂ ಆಯ್ತಾ... ಆಯ್ತಾ... ಎಂದು ತೀರಾ ಅವಸರ ಮಾಡುತ್ತಿದ್ದದ್ದು ಕಿರಿಕಿರಿ ಎನಿಸುತ್ತಿತ್ತು.

ಇಂತಹ ಹೊತ್ತಿನಲ್ಲಿ ಪಟಗಾರರು ಕೊಂಚ ಸ್ವಾರ್ಥಿಗಳಾಗುತ್ತಾರೆ. ಅತ್ಯುತ್ತಮ ಚಿತ್ರ ತಮ್ಮದಾಗಲಿ ಎಂಬ ದುರಾಸೆಯಲ್ಲಿ ಗೆಳೆತನ, ಮುಲಾಜು ಎಲ್ಲಾ ಮರೆಯುತ್ತಾರೆ. ಎಷ್ಟೋ ಸಲ ಗುದ್ದಾಟ, ಬೈಗುಳ, ಬೇಸರ, ಸಿಟ್ಟು, ತಿವಿತ ಎಲ್ಲಾ ಆಗುವುದುಂಟು. ಗೊಣಗಾಡಿಕೊಂಡು ಮತ್ತೆ ಸರಿ ಹೋಗುವುದು ಹೊಸ ಮುನಿಸಿಗೆ ರೆಡಿಯಾಗುವುದು ನಡೆಯುತ್ತಲೇ ಇರುತ್ತದೆ. ಗುಂಪಾಗಿ ಚಿತ್ರಶಿಕಾರಿಗೆ ಹೋದಾಗ ಇವೆಲ್ಲಾ ಮಾಮೂಲು ಸಂಗತಿಗಳು. ಆ ಕ್ಷಣಕ್ಕೆ ಕ್ಯಾಮೆರಾ ಸೆಟ್ಟಿಂಗಿನಲ್ಲಿ ಗೊತ್ತಾಗದ ವಿಷಯಗಳನ್ನು ಪರಸ್ಪರ ಕೇಳುವುದು, ಸಲಹೆ ಕೊಡುವುದು, ಸಹಾಯ ಮಾಡುವುದು, ಸಲಕರಣೆಗಳ ವಿನಿಮಯ ಮಾಡಿಕೊಳ್ಳುವುದು ಕೂಡ ಜರುಗುತ್ತಲೇ ಇರುತ್ತವೆ.

ಹಗಲೊತ್ತಿನಲ್ಲೇ ಎಲೆಗಳ ಮೇಲೆ ಮೊಟ್ಟೆ ಕಾವಿಗೆ